# ಅತ್ಯಂತ ಪರಿಣಾಮಕಾರಿ ಪ್ರಾರ್ಥನೆ

*ಪ್ರತಿ 9 ಗಂಟೆಗಳವರೆಗೆ ಗಂಟೆಗೊಂದು ಸಾರಿ ಹೇಳತಕ್ಕದ್ದು*

ಯೇಸುವೇ, “ಕೇಳಿರಿ ಕೊಡಲಾಗುವುದು, ಹುಡುಕಿರಿ ಸಿಗುವುದು, ತಟ್ಟಿರಿ ತೆರೆಯಲಾಗುವುದು" ಎಂದು ಹೇಳಿದ್ದೀರಿ. ನಿಮ್ಮ ಮಾತೆ ಪರಿಶುದ್ಧ ಮರಿಯಮ್ಮನವರ ಮುಖಾಂತರ ಕೇಳುತ್ತಾ, ಹುಡುಕುತ್ತಾ, ತಟ್ಟುತ್ತಾ ನಿಮ್ಮಲ್ಲಿಗೆ ಬಂದಿರುತ್ತೇನೆ.

ಯೇಸುವೇ “ನನ್ನ ಹೆಸರಿನಲ್ಲಿ ನೀವು ಏನನ್ನು ಕೇಳಿದರೂ ನನ್ನ ತಂದೆಯು ಅದನ್ನು ದಯಪಾಲಿಸುವರು" ಎಂದು ಹೇಳಿದ ಕರ್ತರು ನೀವೇ. ನಿಮ್ಮ ಮಾತೆ ಪರಿಶುದ್ಧ ಮರಿಯಮ್ಮನವರ ಮುಖಾಂತರ ನನ್ನ ಕೋರಿಕೆಯನ್ನು ನಿಮ್ಮ ತಂದೆಯಾದ ದೇವರಿಗೆ ಒಪ್ಪಿಸುವಂತೆ ವಿನಯದಿಂದ ಬೇಡಿಕೊಳ್ಳುತ್ತೇನೆ.

ಯೇಸುವೇ, "ಭೂಮಿ ಆಕಾಶವು ಅಳಿದು ಹೋಗುವುದು, ಆದರೆ ನನ್ನ ವಾಕ್ಯವು ಅಳಿಯಲಾರದು" ಎಂದು ನುಡಿದ ಯೇಸುವೇ, ನಿಮ್ಮ ಮಾತೆ ಮರಿಯಮ್ಮನವರ ಬಿನ್ನಹಗಳಿಂದ ನನ್ನ ಪ್ರಾರ್ಥನೆ ಈಡೇರುವುದೆಂದು ದೃಢವಾಗಿ ನಂಬುತ್ತೇನೆ.